Vijaya Karnataka _ Karnataka on 28.09.2020

# ಕರ್ನಾಟಕ ಜೀವವೈವಿಧ್ಯ ಮಂಡಳಿ

ಕರ್ನಾಟಕ ಸರ್ಕಾರ

(ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆ)

## ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ :ಅಪಜೀ 154 ಇಎನ್‌ವಿ 2018 ದಿನಾಂಕ: 15.09.2020

## ಜೈವಿಕ ವೈವಿಧ್ಯ ಅಧಿನಿಯಮ 2002ರ 49(1)ರಡಿ ನಿರ್ದೇಶನಗಳು

ಕರ್ನಾಟಕ ಸರ್ಕಾರವು ಜೈವಿಕ ವೈವಿಧ್ಯ ಅಧಿನಿಯಮ 2002ರ ಪ್ರಕರಣ 49(1)ರಡಿ ತನ್ನ ಅಧಿಕಾರವನ್ನು ಚಲಾಯಿಸುತ್ತಾ ವಾಣಿಜ್ಯ ಬಳಕೆಗಾಗಿ ಕರ್ನಾಟಕದಲ್ಲಿ ಜೈವಿಕ ಸಂಪನ್ಮೂಲಗಳನ್ನು ಉಪಯೋಗಿಸುತ್ತಿರುವ ಸಂಸ್ಥೆಗಳಿಗೆ ಕಾಯ್ದೆಯ ನಿಬಂಧನೆಗಳನ್ನು ಪಾಲನೆ ಮಾಡಲು ನಿರ್ದೇಶನಗಳ ಮುಖಾಂತರ 60 ದಿನಗಳ ಕಾಲಾವಧಿಯ ಸದಾವಕಾಶವನ್ನು ಒದಗಿಸಿದೆ.

**ನಿರ್ದೇಶನಗಳು ಇಂತಿವೆ:**

1. ಜೈವಿಕ ವೈವಿಧ್ಯ ಅಧಿನಿಯಮ, 2002ರ ಸೆಕ್ಷನ್ 7ರ ವ್ಯಾಪ್ತಿಯಲ್ಲಿ ಬರುವ, ಜೈವಿಕ ವೈವಿಧ್ಯ ಕಾಯ್ದೆಯ ನಿಬಂಧನೆಗಳು ಮತ್ತು ನಿಯಮಗಳನ್ನು ಪಾಲಿಸಲು ಅನ್ವಯಿಸುವ ಭಾರತದ ಎಲ್ಲಾ ಸಂಬಂಧಿಸಿದ ನಾಗರೀಕರೂ/ಸಂಸ್ಥೆಗಳೂ ಕರ್ನಾಟಕ ಜೀವವೈವಿಧ್ಯ ಮಂಡಳಿಗೆ ಅರ್ಜಿ ನಮೂನೆ–1 ರಲ್ಲಿ ಪೂರ್ವ ಮಾಹಿತಿಯನ್ನು ಈ ನಿರ್ದೇಶನ ಹೊರಡಿಸಿದ 60 ದಿನಗಳೊಳಗಾಗಿ ಸಲ್ಲಿಸತಕ್ಕದ್ದು.

2. ಜೈವಿಕ ಸಂಪನ್ಮೂಲಗಳ ಬಳಕೆ, ಸಂಬಂಧಿತ ಜ್ಞಾನ, ಬಳಕೆ ಹಾಗೂ ಲಾಭ ಹಂಚಿಕೆಯು 2014ರಿಂದ ಜಾರಿಗೆ ಬಂದಿದ್ದು, ಜೈವಿಕ ಸಂಪನ್ಮೂಲಗಳನ್ನು ಪಡೆದುಕೊಳ್ಳುವ ಕುರಿತಂತೆ ನಿರ್ದೇಶನಗಳನ್ನು ಪರಿಗಣನೆಗೆ ತೆಗೆದುಕೊಂಡು ಕಾಯ್ದೆಯ ಅಂಶಗಳ ಅನುಪಾಲನೆಗೆ ಅವಕಾಶವನ್ನು ದಿನಾಂಕ:15.09.2020 ರಿಂದ 15.11.2020 ರವರೆಗೆ ನೀಡಲಾಗಿದೆ. ಯಾವ ಚಟುವಟಿಕೆಗಳಿಗೆ ಈ ಹಿಂದೆ ಅನುಮೋದನೆಯನ್ನು ಪಡೆಯಬೇಕಾಗಿತ್ತೋ ಅಂತಹ ಚಟುವಟಿಕೆಗಳಿಗೆ ಮಾತ್ರ ಕೆಲವೊಂದು ಷರತ್ತಿಗೊಳಪಟ್ಟು ಈ ಅವಕಾಶವನ್ನು ನೀಡಿದೆ.

3. ಜೈವಿಕ ಸಂಪನ್ಮೂಲಗಳನ್ನು ಪಡೆದುಕೊಳ್ಳುವ ಸಂಬಂಧ ಅರ್ಜಿ ನಮೂನೆ–1ನ್ನು ಘಟನೋತ್ತರ ಅನುಮೋದನೆಗಾಗಿ (Ex-post facto) ಸಲ್ಲಿಸುವ ಎಲ್ಲಾ ಅರ್ಜಿಗಳನ್ನು ಮಂಡಳಿಯು ವಿಚಾರಣೆ ಮೂಲಕ ಪರಿಶೀಲಿಸುವುದು ಹಾಗೂ ಸೂಕ್ತವಾದ ಮತ್ತು ಸಮಂಜಸವಾದ ಸಮರ್ಥನೆಗಳನ್ನು ಮತ್ತು ಕಾರಣಗಳನ್ನು ದಾಖಲಿಸಿದ್ದಲ್ಲಿ, ಅಂತಹ ಅರ್ಜಿಗಳು ಮಂಡಳಿಗೆ ಒಪ್ಪಿಗೆಯಾದಲ್ಲಿ ಮಾತ್ರ ಅನುಮೋದನೆ ನೀಡಬಹುದು. ಇಂತಹ ಎಲ್ಲಾ ಘಟನೋತ್ತರ ಅನುಮೋದನೆಗಳ ಪ್ರಕರಣಗಳನ್ನು ಅರ್ಹತೆಯ ಆಧಾರದ ಮೇಲೆ ಪರಿಗಣಿಸತಕ್ಕದ್ದು ಹಾಗೂ ಯಾವ ವ್ಯಕ್ತಿ/ಘಟಕವು ಸಾಮಾನ್ಯವಾಗಿ ಪೂರ್ವಾನುಮತಿಗಾಗಿ ನಿಗದಿತ ಸಮಯದಲ್ಲಿ ಅರ್ಜಿ ಸಲ್ಲಿಸಿದಾಗ ಪೂರ್ವಾನುಮತಿ ನೀಡಬಹುದಾದಂತಹ ಪ್ರಕರಣಗಳಲ್ಲಿ ಮಾತ್ರ ಭವಿಷ್ಯದ ಚಟುವಟಿಕೆಗಳಿಗಾಗಿ ಅನುಮತಿ ನೀಡುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.

ಮುಂದುವರಿದು ಈ ಆದೇಶ ಹೊರಡಿಸಿದ ದಿನಾಂಕದಿಂದ 60 ದಿನಗಳ ಅವಧಿಯೊಳಗಾಗಿ ಹಿಂದಿನ ಅವಧಿಗೆ ಸಂಬಂಧಿಸಿದ ಪ್ರಕರಣಗಳೂ ಸೇರಿದಂತೆ ಕ್ರಮ ಕೈಗೊಳ್ಳುವ ಬಗ್ಗೆ ತೀರ್ಮಾನ ತೆಗೆದುಕೊಳ್ಳುವಂತೆ ಕರ್ನಾಟಕ ಸರ್ಕಾರವು ಮಂಡಳಿಗೆ ನಿರ್ದೇಶಿಸಿದೆ.

ಆದ್ದರಿಂದ, ಕರ್ನಾಟಕದಿಂದ ಜೈವಿಕ ಸಂಪನ್ಮೂಲಗಳನ್ನು ವಾಣಿಜ್ಯ ಬಳಕೆಗಾಗಿ ಉಪಯೋಗಿಸುವ ಎಲ್ಲರ ಗಮನ ಸೆಳೆಯುತ್ತಾ, ಕಾಯ್ದೆಯ ನಿಬಂಧನೆಗಳನ್ನು ಪಾಲನೆ ಮಾಡಬೇಕೆಂದು ಮತ್ತು ನಮೂನೆ–1 ಹಾಗೂ ಲಾಭಾಂಶದ ನ್ಯಾಯ ಸಮ್ಮತ ಹಂಚಿಕೆ ಸಂಬಂಧ ಕರ್ನಾಟಕ ಜೈವಿಕ ವೈವಿಧ್ಯ ಮಂಡಳಿಗೆ ಬದ್ಧರಾಗಿರಲು ಸೂಚಿಸಿದೆ. ಇದಕ್ಕೆ ತಪ್ಪಿದಲ್ಲಿ ಜೈವಿಕ ವೈವಿಧ್ಯ ಅಧಿನಿಯಮ 2002ರ ಪ್ರಕರಣ 55 ಮತ್ತು 56ರ ಪ್ರಕಾರ ಕ್ರಮ ಜರುಗಿಸಲಾಗುವುದು.

ಸಂಪರ್ಕಿಸಬೇಕಾದ ವಿಳಾಸ:

**ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ಜೀವವೈವಿಧ್ಯ ಮಂಡಳಿ**

ವನವಿಕಾಸ, ನೆಲ ಮಹಡಿ, 18ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003

ಫೋನ್ ನಂ.: 080–23448783 ಇ–ಮೇಲ್: kbb-ka@nic.in

DIPR/DDU/YC/1212/2020-21

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:

**https://kbb.karnataka.gov.in**